ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
(ಹಿಂದಿನ ಕರ್ನಾಟಕ ಭೂಸೇನಾ ನಿಗಮ ನಿಯಮಿತ)
KARNATAKA RURAL INFRASTRUCTURE DEVELOPMENT LTD.,
(A Government of Karnataka Undertaking)
(Formerly Karnataka Land Army Corporation Limited)

ಸಂ: ಕೆಆರ್‌ಐಡಿಎಲ್/ಗಣಕ/ಆರ್‌ಟಿಐ/2013-14 ದಿನಾಂಕ: 20/03/2014

**ತುರ್ತು**

# ಸುತ್ತೋಲೆ

**ವಿಷಯ:** **ಮಾಹಿತಿ ಹಕ್ಕು ಅಧಿನಿಯಮ 2005ರ ಅಡಿ ಕಡತಗಳನ್ನು ವಿಷಯ ಸೂಚಿಯೊಂದಿಗೆ ಕಲಂ 4(1)(ಎ) ಮತ್ತು 4(1)ಬಿ ಅಡಿಯಲ್ಲಿ ಗಣಕೀಕರಣಗೊಳಿಸಿ ಕೆಆರ್‌ಐಡಿಎಲ್‌ನ ವೆಬ್‌ಸೈಟ್ www.kridl.gov.in ಪ್ರಕಟಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವ ಕುರಿತು.**

**ಉಲ್ಲೇಖ:**
1. ಕರ್ನಾಟಕ ಸರ್ಕಾರದ ಸಚಿವಾಲಯದ ಸುತ್ತೋಲೆ ಸಂ:ಸಿಆಸುಇ/140/ಆರ್‌ಟಿಐ/2012 ದಿನಾಂಕ:19/11/2012.
2. ಈ ಕಛೇರಿ ಪತ್ರ ಸಂ: ಕೆಆರ್‌ಐಡಿಎಲ್/ಗಣಕ/ಆರ್‌ಟಿಐ/2012-13 ದಿನಾಂಕ: 10/04/2013
3. ಈ ಕಛೇರಿ ಪತ್ರ ಸಂ: ಕೆಆರ್‌ಐಡಿಎಲ್/ಗಣಕ/ಆರ್‌ಟಿಐ/2013-14 ದಿನಾಂಕ: 24/04/2013
4. ಕೇಂದ್ರ ಕಛೇರಿಯ ಪತ್ರ ಸಂ: ಕೆಆರ್‌ಐಡಿಎಲ್/ಗಣಕ/ಆರ್‌ಟಿಐ/2012-13 ದಿನಾಂಕ: 24/09/2013
5. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ರವರ ಅಸಾಪ ಸಂ: ಗ್ರಾಅಪ/10/ಇತರೆ/2014 ದಿನಾಂಕ:12/03/2014.

******

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, **ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಎ)** ಪ್ರಕಾರ ಕಛೇರಿಯ ಕಡತಗಳನ್ನು (Cataloguing, Indexing) ವಿಷಯ ಸೂಚಿಯೊಂದಿಗೆ **ಮತ್ತು 4(1)ಬಿ** ಅಡಿ 17 ಅಂಶಗಳನ್ನು ಒಳಗೊಂಡ ಕಛೇರಿ ವಿವರಗಳನ್ನು ಕೆಆರ್‌ಐಡಿಎಲ್‌ನ ವೆಬ್‌ಸೈಟ್ www.kridl.gov.in ನಲ್ಲಿ ಪ್ರಕಟಿಸಲು ಮಾಹಿತಿಗಳನ್ನು ಕಾಲಕಾಲಕ್ಕೆ Update ಮಾಡಿ ಕೇಂದ್ರ ಕಛೇರಿಗೆ ಸಲ್ಲಿಸಲು ಉಲ್ಲೇಖಿತ ಸುತ್ತೋಲೆಯಡಿ ಹಲವಾರು ಬಾರಿ ಸೂಚನೆಗಳನ್ನು ನೀಡಲಾಗಿತ್ತು.

ಆದರೆ ಬಹುಪಾಲು ಮೈಸೂರು ವಲಯಕ್ಕೆ ಸಂಬಂಧಿಸಿದಂತೆ, ಬೆಳಗಾಂ ವಲಯದ ಧಾರವಾಡ ವಿಭಾಗ, ಗುಲ್ಬರ್ಗಾ ವಲಯದ ಯಾದಗಿರಿ, ರಾಯಚೂರು, ಕೇಂದ್ರ ವಲಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ವಿಭಾಗ, ಬೆಂಗಳೂರು ವಲಯಕ್ಕೆ ಸಂಬಂಧಿಸಿದಂತೆ ವಲಯ ಕಛೇರಿ, ಸ.ಕಾ.ಅ. ಬೆಂಗಳೂರು ಗ್ರಾಮಾಂತರ, ಸ.ಕಾ.ಅ. ಬಿಎಂಆರ್‌ಸಿಎಲ್-2ಕ್ಕೆ ಸಂಬಂಧಿಸಿದಂತೆ 4(1)ಎ ರ ಮಾಹಿತಿಗಳನ್ನು ಸಲ್ಲಿಸಿರುತ್ತಾರೆ. ಉಳಿದ ವಲಯ ವಿಭಾಗ, ಉಪ ವಿಭಾಗಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಇಲ್ಲಿಯವರೆಗೆ ಕೇಂದ್ರ ಕಛೇರಿಗೆ ಕಳುಹಿಸಿರುವುದಿಲ್ಲ.

. . . . .2

22/3/14
DESPATCHED

Grameenabhivruddhi Bhavana,
4th & 5th Floor, Anandrao Circle,
Bangalore-560 009.
Off : 080-22879901, 22879902
E-mail : mdkridl@gmail.com

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
(ಹಿಂದಿನ ಕರ್ನಾಟಕ ಭೂಸೇನಾ ನಿಗಮ ನಿಯಮಿತ)
**KARNATAKA RURAL INFRASTRUCTURE DEVELOPMENT LTD.,**
(A Government of Karnataka Undertaking)
(Formerly Karnataka Land Army Corporation Limited)
ಸೇವೆ ನಿಷ್ಠ ದಕ್ಷತೆ



ಉಲ್ಲೇಖ 5ರ ಪ್ರಕಾರ ಕರ್ನಾಟಕ ಸರ್ಕಾರವು ಮತ್ತೊಮ್ಮೆ ಸದರಿ ವಿಷಯವನ್ನು ಪ್ರಸ್ತಾಪಿಸಿ **ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಎ)** ಪ್ರಕಾರ ಕಛೇರಿಯ ಕಡತಗಳನ್ನು (Cataloguing, Indexing) ವಿಷಯ ಸೂಚಿಯೊಂದಿಗೆ **ಮತ್ತು 4(1)ಬಿ** ಅಡಿ 17 ಅಂಶಗಳನ್ನು ಒಳಗೊಂಡ ಕಛೇರಿ ವಿವರಗಳನ್ನು ದಿನಾಂಕ:31/03/2014ಕ್ಕೆ ಇದ್ದಂತೆ ಪರಿಪೂರ್ಣಗೊಳಿಸಿ (Update) ಪ್ರಕಟಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಉಲ್ಲೇಖ 1 ಮತ್ತು ಉಲ್ಲೇಖ 5ರ ಸರ್ಕಾರದ ಸುತ್ತೋಲೆ ಮತ್ತು ಅರೆಸರ್ಕಾರಿ ಪತ್ರದ ಪ್ರತಿಯನ್ನು ಲಗತ್ತಿಸಲಾಗಿದೆ. ಕಾರ್ಯಪಾಲಕ ಅಭಿಯಂತರರು, ಚಾಮರಾಜನಗರ ಇವರು ಈಗಾಗಲೇ ಸಲ್ಲಿಸಿರುವ ನಿಗದಿತ ನಮೂನೆಯ ಪ್ರತಿಯನ್ನು ಸಹಾ **ಮಾದರಿಗೆ** ಪತ್ರದೊಂದಿಗೆ ಲಗತ್ತಿಸಲಾಗಿದೆ ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾದರಿ ಪ್ರತಿಗಳನ್ನು **ಕೆ.ಆರ್.ಐ.ಡಿ.ಎಲ್‌ನ ವೆಬ್‌ಸೈಟ್ www.kridl.gov.in** ನ download ಲಿಂಕ್ ನಲ್ಲಿ ವೀಕ್ಷಿಸಿ ಮಾಹಿತಿ ಪಡೆಯಬಹುದಾಗಿದೆ.

ಕರ್ನಾಟಕ ರಾಜ್ಯ ಮಾಹಿತಿ ಆಯುಕ್ತರು ಬೆಂಗಳೂರು ಇವರು ಆರ್‌ಟಿಐ 2005ರ ಕಲಂ 4(1)ಎ ಪ್ರಕಾರ ಕಛೇರಿಯ ಕಡತಗಳನ್ನು (Cataloguing, Indexing) ವಿಷಯಸೂಚಿಯೊಂದಿಗೆ **ಮತ್ತು 4(1)ಬಿ** ಅಡಿ 17 ಅಂಶಗಳನ್ನು ಒಳಗೊಂಡ ಕಛೇರಿ ವಿವರಗಳನ್ನು ಈಗಾಗಲೇ ಸಲ್ಲಿಸಿದ್ದರೂ ಸಹಾ ದಿನಾಂಕ:31/03/2014ಕ್ಕೆ ಇದ್ದಂತೆ ಪರಿಪೂರ್ಣಗೊಳಿಸಿ (Update) ಪ್ರಕಟಿಸಲು ಸೂಚಿಸಿರುವುದರಿಂದ ಸಂಬಂಧಿಸಿದ ಅಧಿಕಾರಿಗಳು ವಿಳಂಬ ಮಾಡದೆ **ಸಹಿ ಮಾಡಿದ** (Signed) ವರದಿಯನ್ನು (Hard Copy) ಆದ್ಯತೆ ಮೇರೆಗೆ ಕೇಂದ್ರ ಕಛೇರಿಗೆ ದಿನಾಂಕ:03/04/2014ರ ಒಳಗೆ ಸಲ್ಲಿಸಲು ಸೂಚಿಸಲಾಗಿದೆ. ತಪ್ಪಿದಲ್ಲಿ ಕರ್ನಾಟಕ ಮಾಹಿತಿ ಆಯೋಗವು ಕೈಗೊಳ್ಳುವ ಕ್ರಮಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಆದ್ದರಿಂದ ಇದಕ್ಕೆ ಅವಕಾಶ ನೀಡದೇ **ಆರ್‌ಟಿಐ 2005ರ ಕಲಂ 4(1)ಎ ಪ್ರಕಾರ ಕಛೇರಿಯ ಕಡತಗಳನ್ನು (Cataloguing, Indexing) ವಿಷಯ ಸೂಚಿಯೊಂದಿಗೆ ಮತ್ತು 4(1)ಬಿ ಅಡಿ 17 ಅಂಶಗಳನ್ನು ಒಳಗೊಂಡ ಕಛೇರಿ ವಿವರಗಳನ್ನು ಕನ್ನಡದಲ್ಲಿ ತಕ್ಷಣ ಕೇಂದ್ರ ಕಛೇರಿಗೆ ಸಲ್ಲಿಸಲು ಮತ್ತೊಮ್ಮೆ ಸೂಚಿಸಲಾಗಿದೆ.**

ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**

1. ಎಲ್ಲಾ ಅಧೀಕ್ಷಕ ಅಭಿಯಂತರರುಗಳಿಗೆ.
2. ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳಿಗೆ.
3. ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ.

**ಪ್ರತಿಯನ್ನು:**

- ಎಲ್ಲಾ ಅಧಿಕಾರಿಗಳು/ಸಿಬ್ಬಂದಿಗಳು, ಕೆಆರ್‌ಡಿಐಎಲ್ ಕೇಂದ್ರ ಕಛೇರಿ-ಇವರಿಗೆ ಮಾಹಿತಿಗಾಗಿ ಹಾಗೂ ಈ ಹಿಂದೆ ನಿಗದಿತ ನಮೂನೆಯಲ್ಲಿ ಸಲ್ಲಿಸಿದ ಮಾಹಿತಿಯನ್ನು Up to date ಮಾಡಿ ಸಹಿ ಮಾಡಿದ Hard copy ಯನ್ನು ಕಂಪ್ಯೂಟರ್ ಶಾಖೆಗೆ 02/04/2014ರ ಒಳಗೆ ಸಲ್ಲಿಸಲು ಸೂಚಿಸಲಾಗಿದೆ.

Grameenabhivruddhi Bhavana,
4th & 5th Floor, Anandrao Circle,
Bangalore-560 009.

Off : 080-22879901, 22879902
E-mail : mdkridl@gmail.com